# ಸೇತುಬಂಧ 2023-24

# ವಿಜ್ಞಾನ

## 6ನೇ ತರಗತಿ

# ಸುಗಮಕಾರರ ಕೈಪಿಡಿ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ತುಮಕೂರು
ರಾಜ್ಯಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು
ಹಾಗೂ
ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು

| ಪರಿಕಲ್ಪನೆ ಮತ್ತು ಮಾರ್ಗದರ್ಶನ | |
|---|---|
| ಶ್ರೀ ರಿತೇಶ್ ಕುಮಾರ್ ಸಿಂಗ್ ಭಾ.ಆ.ಸೇ<br>ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.<br>ಬೆಂಗಳೂರು | ಡಾ. ವಿಶಾಲ್.ಆರ್ ಭಾ.ಆ.ಸೇ<br>ಆಯುಕ್ತರು<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ<br>ಬೆಂಗಳೂರು |
| ಶ್ರೀಮತಿ. ಬಿ.ಬಿ ಕಾವೇರಿ. ಭಾ. ಆ. ಸೇ.<br>ರಾಜ್ಯ ಯೋಜನಾ ನಿರ್ದೇಶಕರು,<br>ಸಮಗ್ರ ಶಿಕ್ಷಣ ಕರ್ನಾಟಕ,<br>ಬೆಂಗಳೂರು | ಶ್ರೀಮತಿ ವಿ.ಸುಮಂಗಲ.<br>ನಿರ್ದೇಶಕರು,<br>ಡಿ.ಎಸ್.ಇ.ಆರ್.ಟಿ.<br>ಬೆಂಗಳೂರು. |
| **ಸಲಹೆ ಮತ್ತು ಮಾರ್ಗದರ್ಶನ** | |
| ಶ್ರೀ ಮಂಜುನಾಥ ಕೆ.<br>ಪ್ರಾಚಾರ್ಯರು ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ<br>ತುಮಕೂರು. | ಶ್ರೀಮತಿ ಪದ್ಮಜ ಬಿ.ಎನ್<br>ನೋಡಲ್ ಅಧಿಕಾರಿಗಳು ಹಾಗೂ<br>ಹಿರಿಯ ಉಪನ್ಯಾಸಕರು, ಡಯಟ್<br>ತುಮಕೂರು |
| **ಸಾಹಿತ್ಯ ರಚನಾ ತಂಡ** | |
| ಶ್ರೀ ಉದಯ ಗಾಂವಕರ್<br>ಸ.ಪ್ರೌ.ಶಾಲೆ ಸಿದ್ದಾಪುರ, ಉಡುಪಿ ಜಿಲ್ಲೆ | ಶ್ರೀಮತಿ ಸೀಮಾ<br>CRP, ಕುಶಾಲ ನಗರ, ಕೊಡಗು ಜಿಲ್ಲೆ |
| **ಮಾರ್ಗದರ್ಶನ** | |
| ಶ್ರೀ ಲೇಪಾಕ್ಷಪ್ಪ<br>ಉಪನ್ಯಾಸಕರು, ಡಯಟ್ ದಾವಣಗೆರೆ | |
| ಶ್ರೀ ಶ್ರೀನಿವಾಸರೆಡ್ಡಿ<br>ಉಪನ್ಯಾಸಕರು, ಡಯಟ್ ತುಮಕೂರು | ಶ್ರೀಮತಿ ಶ್ರೀದೇವಿ. ಎನ್<br>ಉಪನ್ಯಾಸಕರು, ಡಯಟ್ ತುಮಕೂರು |
| **ಸಾಹಿತ್ಯ ಪರಿಷ್ಕರಣಾ ತಂಡ** | |
| ಶ್ರೀಮತಿ ರಾಜಲಕ್ಷ್ಮೀ<br>BRP, BRC ಕಛೇರಿ ,ಗುಬ್ಬಿ | ಶ್ರೀಮತಿ ಅಶ್ವಿನಿ<br>CRP, BRC ಕಛೇರಿ, ತುಮಕೂರು |

# ಸೇತುಬಂಧ -2023-24

## ಶಿಕ್ಷಕರಿಗೆ ಸೂಚನೆಗಳು

ಸೇತುಬಂಧ ಶಿಕ್ಷಣವೆಂದರೆ **"ಒಂದು ತರಗತಿಗೆ ಪ್ರವೇಶ ಪಡೆದ ಮಗುವು ಹಿಂದಿನ ತರಗತಿಯಲ್ಲಿ ಗಳಿಸಿದ ಸಾಮರ್ಥ್ಯ, ಕಲಿಕೆಯ ಗುಣದೋಷಗಳನ್ನು ಗುರುತಿಸಿ ಮುಂದಿನ ಕಲಿಕೆಗೆ ಸಿದ್ದಗೊಳಿಸುವ ಪ್ರಕ್ರಿಯೆ."**

ಆತ್ಮೀಯ ಶಿಕ್ಷಕ ಬಂಧುಗಳೆ, 15 ದಿನಗಳ ಸೇತುಬಂಧ ಕಾರ್ಯಕ್ರಮದ ಪೂರ್ಣ ವಿವರವನ್ನು ತಮಗೆ ನೀಡಲಾಗಿದೆ, ದಯಮಾಡಿ ಒಮ್ಮೆ ಈ ಸಾಹಿತ್ಯವನ್ನು ಪೂರ್ಣ ಓದಿಕೊಂಡು ಅರ್ಥೈಸಿಕೊಳ್ಳಲು ಕೋರುತ್ತಿದ್ದೇವೆ. ಸೇತುಬಂಧ ಕಲಿಕಾ ಪ್ರಕ್ರಿಯೆಯು ಚಟುವಟಿಕೆ ಆಧಾರಿತ, ಶಿಶು ಕೇಂದ್ರಿತ ಹಾಗೂ ಸಂತಸದಾಯಕವಾಗಿ ನಡೆಯಲಿ. ಈ ಸಾಹಿತ್ಯದಲ್ಲಿರುವ ಚಟುವಟಿಕೆಗಳು ಕೇವಲ ಮಾದರಿಯಾಗಿರಲೆಂದು ನೀಡಲಾಗಿದೆ . ಸ್ಥಳೀಯ ಸನ್ನಿವೇಶ ಮತ್ತು ಅಗತ್ಯತೆಗಳನ್ನು ಅರಿತು, ಸೃಜನಾತ್ಮಕವಾಗಿ ಚಟುವಟಿಕೆಗಳನ್ನು ತಾವು ರೂಪಿಸಿಕೊಳ್ಳಲು ಸ್ವತಂತ್ರರು, ಅದಕ್ಕಾಗಿ ತಾವು ಅಗತ್ಯ ಪೂರ್ವಸಿದ್ಧತೆಯೊಂದಿಗೆ ಚಟುವಟಿಕೆಗಳನ್ನು ಆಯೋಜಿಸಬೇಕಿದೆ. ಅಲ್ಲದೆ ಇಲ್ಲಿನ ಚಟುವಟಿಕೆಗಳನ್ನು ಕೇವಲ ಆಯೋಜಿಸುವ ಚಟುವಟಿಕೆಗಳಾಗಿ ನೋಡದೆ, ಕಲಿಕೆಯನ್ನು ಖಾತ್ರಿಪಡಿಸಿಕೊಳ್ಳವ ಸಾಧನಗಳನ್ನಾಗಿ ಬಳಸಿಕೊಳ್ಳಬೇಕಿದೆ. ಈ ಚಟುವಟಿಕೆಗಳನ್ನು ಮಾಡುವ ಸಂದರ್ಭದಲ್ಲಿ ಕೇವಲ ಕೆಲವು ವಿದ್ಯಾರ್ಥಿಗಳನ್ನಷ್ಟೆ ಗಮನದಲ್ಲಿರಿಸದೆ, ಎಲ್ಲಾ ವಿದ್ಯಾರ್ಥಿಗಳ ಕಲಿಕೆಯನ್ನು ಗಮನಿಸಿ ಅನುಕೂಲಿಸಬೇಕಿದೆ. ಇದಕ್ಕೆ ಸಹಾಯಕವಾಗಲೆಂದು ಪ್ರತಿ ಕಲಿಕಾಫಲಕ್ಕೆ ಹೆಚ್ಚಿನ ಚಟುವಟಿಕೆಗಳನ್ನು ಇಲ್ಲಿ ನೀಡಲಾಗಿದೆ. ಪ್ರಸ್ತುತ ಈ ಸಾಹಿತ್ಯವನ್ನು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ, ವಿಜ್ಞಾನ ವಿಷಯದ ದೃಷ್ಟಿಕೋನಕ್ಕೆ ಪೂರಕವಾದ ಹಾಗೂ ಪ್ರಸಕ್ತ ವರ್ಷದ ಕಲಿಕಾ ಫಲಗಳಿಗೆ ನೆರವಾಗುವ ಹಿಂದಿನ ತರಗತಿಯ ಕಲಿಕಾಂಶಗಳನ್ನು ಗಮನದಲ್ಲಿಟ್ಟುಕೊಂಡು ಹತ್ತು ಕಲಿಕಾಫಲಗಳನ್ನು ಸೇತುಬಂಧ ಕಾರ್ಯಕ್ರಮಕ್ಕೆ ನೀಡಲಾಗಿದೆ. ಅದಕ್ಕಾಗಿ ನೀವುಗಳು,

- ಪೂರ್ವ ಪರೀಕ್ಷೆಯ ನಂತರ **ಎಫ್.ಎಲ್.ಎನ್** ಕಲಿಕೆಯ ಕೊರತೆ ಇರುವ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಲಭ್ಯವಿರುವ ವಿಜ್ಞಾನದ ಕಲಿಕಾ ಸಾಮಗ್ರಿಗಳನ್ನು ಬಳಸಿಕೊಂಡು ಎಫ್.ಎಲ್.ಎನ್ ಅನ್ನು ಸಾಧಿಸುವುದು.
- ಎಫ್.ಎಲ್.ಎನ್ ಸಾಧನೆಗೆ **15** ದಿನಗಳ ಪೂರ್ಣ ಸಮಯ ಬೇಕಾದಲ್ಲಿ ಉಳಿದ ಕಲಿಕಾಫಲಗಳನ್ನು ಸೇತುಬಂಧದ ನಂತರ ಪಾಠ ಬೋಧನೆಯ ಸಂದರ್ಭದಲ್ಲಿ ಎಫ್.ಎಲ್.ಎನ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಗಮನ ನೀಡಿ ಕಲಿಯಬೇಕಾದ ಕಲಿಕಾ ಫಲಗಳಿಗೆ ಬ್ರಿಡ್ಜ್ ಮಾಡುವುದು.
- ಪೂರ್ವ ಪರೀಕ್ಷೆಯ ನಂತರ ಸೇತುಬಂಧ ನಡೆಸಲು ಎಫ್.ಎಲ್.ಎನ್ ವಿದ್ಯಾರ್ಥಿಗಳು ಮತ್ತು ಇತರೆ ವಿದ್ಯಾರ್ಥಿಗಳ ಹಿನ್ನಲೆ ಮತ್ತು ಕಲಿಕಾ ಮಟ್ಟ ಅರಿತು ವಿದ್ಯಾರ್ಥಿವಾರು ಸೂಕ್ತ ಚಟುವಟಿಕೆಗಳನ್ನು ಗುರುತಿಸಿಕೊಂಡು ಸಂತಸದಾಯಕ ಕಲಿಕೆಗೆ ಒತ್ತು ನೀಡುವುದು.
- ಸಾಫಲ್ಯ ಪರೀಕ್ಷೆ ನಡೆಸಿದ ನಂತರ **SAP** ನ **ನಮೂನೆ 5** ರಲ್ಲಿ ಕ್ರಿಯಾ ಯೋಜನೆ ರೂಪಿಸುವುದು.

- ಸಾಫಲ್ಯ ಪರೀಕ್ಷೆಯ ನಂತರವೂ ಎಫ್.ಎಲ್.ಎನ್ ಕೊರತೆ ಇರುವ ಮಕ್ಕಳು ಎಫ್.ಎಲ್.ಎನ್ ಸಾಧಿಸಲು ವಿದ್ಯಾರ್ಥಿವಾರು ಕ್ರಿಯಾ ಯೋಜನೆ ರೂಪಿಸಿಕೊಂಡು ಅನುಷ್ಠಾನಿಸುವುದು.
- ಸಾಫಲ್ಯ ಪರೀಕ್ಷೆಯ ನಂತರ ವಿಜ್ಞಾನ ವಿಷಯದ ದೃಷ್ಟಿಕೋನ- ವೈಜ್ಞಾನಿಕ ಮನೋಭಾವ,ತಾರ್ಕಿಕ ಚಿಂತನೆ, ಪ್ರಾಯೋಗಿಕ ಅನ್ವಯಿಕ ಜ್ಞಾನ ವೃದ್ಧಿಗೆ  ಹಾಗೂ ಹಿಂದಿನ ತರಗತಿಗಳಲ್ಲಿ ಅಗತ್ಯ ಕಲಿಕಾಂಶಗಳ ಕಲಿಕೆಯ ಕೊರತೆ ಇರುವ ಮಕ್ಕಳಿಗೆ ಈ ಸಾಲಿನ ಪಾಠ ಬೋಧನೆಯ ಪ್ರಾರಂಭದಲ್ಲಿ ಮೇಲಿನ ಅಂಶಗಳಿಗೆ ಒತ್ತು ನೀಡಿ ಪೂರಕ ಚಟುವಟಿಕೆ ನಡೆಸಿ ಕಲಿಕೆಗೆ ಬ್ರಿಡ್ಜ್ ಮಾಡುವುದು.

ಎಫ್.ಎಲ್.ಎನ್ ಅನ್ನು, ವಿಜ್ಞಾನ ವಿಷಯದ ದೃಷ್ಟಿಕೋನದ ಪರಿಕಲ್ಪನೆಗಳನ್ನು ಹಾಗೂ ಈ ಸಾಲಿನ ಕಲಿಕಾ ಫಲಗಳಿಗೆ ಪೂರಕವಾಗಿ ಅಗತ್ಯವೆನ್ನಿಸುವ ಹಿಂದಿನ ಸಾಲಿನ ಕಲಿಕಾಂಶಗಳನ್ನು, ಶಾಲಾ ಪ್ರಾರಂಭದಲ್ಲೆ ಚಟುವಟಿಕೆ ಆಧಾರಿತವಾಗಿ, ವಿದ್ಯಾರ್ಥಿ ಕೇಂದ್ರಿತವಾಗಿ ಹಾಗೂ ಸಂತಸದಾಯಕವಾಗಿ ಕಲಿಸಿ ಈ ವರ್ಷದ ತರಗತಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದೇ ಈ ಕಾರ್ಯಕ್ರಮದ ಮಹದಾಶಯವಾಗಿರುತ್ತದೆ. ಈ ಎಲ್ಲಾ ಆಶಯಗಳು ಸಾಕಾರಗೊಳ್ಳಲು ತಾವುಗಳು ಸಂಬಂಧಿಸಿದ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಆಯೋಜಿಸಿ ಗುಣಾತ್ಮಕ ಕಲಿಕೆಗೆ ಭದ್ರ ಬುನಾದಿ ಹಾಕುವಿರೆಂದು ಆಶಿಸುತ್ತೇವೆ ಮತ್ತು ಈ ಸಾಹಿತ್ಯವನ್ನು ತಮ್ಮ ಮೂಲಕ ಮಕ್ಕಳಿಗೆ ಅರ್ಪಿಸುತ್ತೇವೆ. ಶುಭವಾಗಲಿ.

# ಅಪೇಕ್ಷಿತ ಕಲಿಕಾ ಫಲಗಳ ಪಟ್ಟಿ

1. ಸಸ್ಯ ಮತ್ತು ಪ್ರಾಣಿಗಳಲ್ಲಿ ಪೋಷಣೆಯನ್ನು ಅರಿಯುವರು.
2. ನೈಸರ್ಗಿಕ ಸಂಪನ್ಮೂಲಗಳು ಮಿತ ಬಳಕೆ ಹಾಗೂ ಅವುಗಳ ಸಂರಕ್ಷಣೆಯ ಬಗ್ಗೆ ತಿಳಿಯುವರು.
3. ಸಜೀವಿ ಮತ್ತು ನಿರ್ಜೀವಿಗಳ ಲಕ್ಷಣಗಳನ್ನು ತಿಳಿಯುವರು
4. ಘನ, ದ್ರವ, ಅನಿಲಗಳನ್ನು ಅವುಗಳ ಗುಣಲಕ್ಷಣಗಳ ಆಧಾರದ ಮೇಲೆ ವರ್ಗೀಕರಿಸುವರು.
5. ನೀರಿನ ಮೂಲಗಳು, ನೀರಿನ ಉಪಯೋಗಗಳು,ಮಾಲಿನ್ಯ ಹಾಗೂ ಸಂರಕ್ಷಣಾ ಕ್ರಮಗಳನ್ನು ಅರಿಯುವರು.
6. ಗಾಳಿಯ ಘಟಕಗಳು ಅವುಗಳ ಲಕ್ಷಣಗಳು ಮತ್ತು ವಾಯು ಮಾಲಿನ್ಯದ ಕುರಿತು ತಿಳಿಯುವರು.
7. ಆಹಾರದ ಮೂಲಗಳು, ಆಹಾರದಲ್ಲಿರುವ ಪೋಷಕಾಂಶಗಳ ಬಗ್ಗೆಅರಿಯುವರು.

   ಆಹಾರ ಪೋಲಾಗುತ್ತಿರುವ ವಿವಿಧ ಸಂದರ್ಭಗಳನ್ನು ಅರಿಯುವರು.ಸಂರಕ್ಷಣೆಯ ಅಗತ್ಯವನ್ನುಅರಿಯುವರು.
8. ತ್ಯಾಜ್ಯವಿಲೇವಾರಿ ಕ್ರಮಗಳನ್ನುಅರಿಯುವರು.
9. ಪ್ಲಾಸ್ಟಿಕ್ ಬಳಕೆಗೆ ಪರ್ಯಾಯವಾಗಿ ಪರಿಸರ ಸ್ನೇಹಿ ವ್ಯವಸ್ಥೆಯನ್ನು ಕಂಡುಕೊಳ್ಳುವರು.
10. ಹವಾಮಾನ, ಭೂಪ್ರದೇಶ ಮತ್ತು ಸಂಪನ್ಮೂಲಗಳ ನಡುವಿನ ಸಂಬಂಧವನ್ನು ಗ್ರಹಿಸುವರು.

# ಸೇತುಬಂಧ 2023-24

## 15 ದಿನಗಳ ಕಲಿವಿನ ಚಟುವಟಿಕೆಗಳು

**ತರಗತಿ:- 6** **ವಿಷಯ:- ವಿಜ್ಞಾನ**

| ಕ್ರ ಸಂ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 1 | ಸಸ್ಯ ಮತ್ತು ಪ್ರಾಣಿಗಳಲ್ಲಿ ಪೋಷಣೆಯನ್ನು ಅರಿಯುವರು. | 1. ಸಸ್ಯಗಳಲ್ಲಿ ಪೋಷಣೆ. | 1.ಆಹಾರದ ಮೂಲಗಳ ಬಗ್ಗೆ ಚರ್ಚೆ.<br>2 ದ್ಯುತಿ ಸಂಶ್ಲೇಷಣಾ ಕ್ರಿಯೆಯ ವಿಡಿಯೋ ವೀಕ್ಷಣೆ.<br>3. ದ್ಯುತಿ ಸಂಶ್ಲೇಷಣಾ ಕ್ರಿಯೆಯ ಚಿತ್ರಪಟ ವೀಕ್ಷಣೆ.<br>34 ಪರಾವಲಂಬಿ ಪೋಷಣೆಗೆ ಸಂಬಂಧಿಸಿದಂತೆ ವಿಡಿಯೋ ವೀಕ್ಷಣೆ( ಕೀಟಾಹಾರಿ ಸಸ್ಯಗಳು,) | 1.https://youtu.be/IxWXMMb_x60<br>2. ಚಿತ್ರಪಟದ ಸಹಾಯದಿಂದ ಸಂಶ್ಲೇಷಣೆ ಕ್ರಿಯೆಯನ್ನು ವಿವರಿಸುವುದು.<br>3. https://youtu.be/171dqTmkKWQ<br>4. ವಿದ್ಯಾರ್ಥಿಗಳು ಅವರು ಸೇವಿಸಿರುವ ಆಹಾರ ವಸ್ತುಗಳನ್ನು ಪಟ್ಟಿ ಮಾಡಲು ಸೂಚಿಸುವುದು, ಆ ಆಹಾರ ಪದಾರ್ಥಗಳನ್ನು ತಯಾರಿಸಲು ಬಳಸಿರುವ ಸಾಮಗ್ರಿಗಳು ಬಂದಿರುವ ಮೂಲಗಳನ್ನು ಗುರುತಿಸಲು ಸೂಚಿಸುವುದು. ತನ್ಮೂಲಕ ಎಲ್ಲಾ ಆಹಾರ ಪದಾರ್ಥಗಳ ಮೂಲ ಸಸ್ಯಗಳೇ ಆಗಿವೆ ಎಂದು ಕಂಡುಕೊಳ್ಳಲು ಸಹಾಯ ಮಾಡುವುದು ನಂತರ ಸಸ್ಯಗಳು ಈ ಆಹಾರ ಅಂಶಗಳನ್ನು ಹೇಗೆ ತಯಾರಿಸುತ್ತವೆ ಎಂದು ಪ್ರಶ್ನಿಸುತ್ತ ದ್ಯುತಿ ಸಂಶ್ಲೇಷಣೆಯನ್ನು ಪರಿಚಯಿಸುವುದು. |
| | | 2. ಪ್ರಾಣಿಗಳಲ್ಲಿ ಪೋಷಣೆ. | 1. ಮಿಂಚು ಪಟ್ಟಿಗಳ ಸಹಾಯದಿಂದ ಸಸ್ಯಹಾರಿ ಮಾಂಸಾಹಾರಿ ಹಾಗೂ ಮಿಶ್ರಹಾರಿ ಪ್ರಾಣಿಗಳನ್ನು ವರ್ಗೀಕರಿಸುವುದು.<br>2.ನಾನ್ಯಾರು ? ಆಟದ ಸಹಾಯದಿಂದ ಸಸ್ಯಾಹಾರಿ ಮಾಂಸಾಹಾರಿ ಮಿಶ್ರಹಾರಿ ಪ್ರಾಣಿಗಳನ್ನು ಗುರುತಿಸುವುದು. | 1. ವಿವಿಧ ಪ್ರಾಣಿಗಳ ಚಿತ್ರಗಳನ್ನು ಪ್ರದರ್ಶಿಸುತ್ತಾ ಅವುಗಳ ಆಹಾರಭ್ಯಾಸಗಳ ಪಟ್ಟಿ ತಯಾರಿಸುವುದು ಪ್ರಾಣಿಗಳ ಚಿತ್ರಗಳು ಸಸ್ಯಹಾರಿ ಮಾಂಸಹಾರಿ ಮಿಶ್ರಹಾರಿ ಕೀಟಗಳು ಪಕ್ಷಿಗಳು ಹಾಗೂ ಜಲಚರಗಳನ್ನು ಒಳಗೊಂಡಿರಬೇಕು.<br>2. ವಿದ್ಯಾರ್ಥಿಗಳು ವಿವಿಧ ಪ್ರಾಣಿಗಳು ಸೇವಿಸುವ ಆಹಾರವನ್ನು ಗುರುತಿಸಿದ ಬಳಿಕ ಆ ಪ್ರಾಣಿಗಳನ್ನು ಮಾಂಸಾಹಾರಿ ಸಸ್ಯಹಾರಿ ಮತ್ತು ಮಿಶ್ರಹರಿಗಳಾಗಿ ವಿಂಗಡಿಸಲು |

| | | | | |
|---|---|---|---|---|
| | | | | ಸೂಚಿಸುವುದು. ನಂತರ ಆ ಪಟ್ಟಿಯಲ್ಲಿರುವ ಹೆಸರುಗಳಿಗೆ ವಿದ್ಯಾರ್ಥಿಗಳಿಗೆ ತಿಳಿದಿರುವ ಇನ್ನೂ ಹೆಚ್ಚಿನ ಉದಾಹರಣೆಗಳನ್ನು ಸೇರಿಸಲು ಮಾರ್ಗದರ್ಶಿಸುವುದು.<br>3. ಮಿಂಚು ಪಟ್ಟಿಗಳ ಸಹಾಯದಿಂದ ವಿದ್ಯಾರ್ಥಿಗಳು ಸಸ್ಯಹಾರಿ ಮಾಂಸಾಹಾರಿ ಹಾಗೂ ಮಿಶ್ರಹಾರಿಗಳನ್ನು ವರ್ಗೀಕರಿಸಲು ಸಹಾಯ ಮಾಡುವುದು.<br>4. ವಿದ್ಯಾರ್ಥಿಯ ಬೆನ್ನಿಗೆ ಸಸ್ಯಹಾರಿ ಅಥವಾ ಮಾಂಸಾಹಾರಿ ಅಥವಾ ಮಿಶ್ರಹಾರಿ ಪ್ರಾಣಿಯ ಹೆಸರನ್ನು ಬರೆದು ಅಂಟಿಸುವುದು ಉಳಿದ ವಿದ್ಯಾರ್ಥಿಗಳಿಗೆ ಆ ವಿದ್ಯಾರ್ಥಿಯು ಹೌದು ಅಥವಾ ಇಲ್ಲ ಎನ್ನುವ ಪ್ರಶ್ನೆಗಳನ್ನು ಕೇಳಿ ತನ್ನನ್ನು ಯಾರು ಎಂದು ಕಂಡುಕೊಳ್ಳುವುದು. |
| 2. | ನೈಸರ್ಗಿಕ ಸಂಪನ್ಮೂಲಗಳು ಮಿತ ಬಳಕೆ ಹಾಗೂ ಅವುಗಳ ಸಂರಕ್ಷಣೆಯ ಬಗ್ಗೆ ತಿಳಿಯುವರು. | 1. ನೈಸರ್ಗಿಕ ಸಂಪನ್ಮೂಲಗಳ ವಿಧಗಳು ಹಾಗೂ ಅವುಗಳ ಮಿತ ಬಳಕೆ. | 1. ನೈಸರ್ಗಿಕ ಸಂಪನ್ಮೂಲಗಳ ಚಿತ್ರಗಳನ್ನು ಹೊಂದಿರುವ ಮಿಂಚು ಪಟ್ಟಿಗಳನ್ನು ಗುರುತಿಸಲು ಅವಕಾಶ ಕಲ್ಪಿಸುವುದು.<br>2. ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ಚರ್ಚೆ. | 1. ನೈಸರ್ಗಿಕ ಸಂಪನ್ಮೂಲಗಳ ಮಿಂಚು ಪಟ್ಟಿಗಳನ್ನು ತೋರಿಸಿ, ವಿದ್ಯಾರ್ಥಿಗಳಿಗೆ ಗುರುತಿಸಲು ಅವಕಾಶ ಕಲ್ಪಿಸುವುದು.<br>2. ನೈಸರ್ಗಿಕ ಸಂಪನ್ಮೂಲಗಳ ಪ್ರಾಮುಖ್ಯತೆ ಬಗ್ಗೆ ಚರ್ಚೆಗೆ ಅವಕಾಶ ಕಲ್ಪಿಸಿ ಮುಖ್ಯಾಂಶಗಳನ್ನು ವಿದ್ಯಾರ್ಥಿಗಳಿಗೆ ದಾಖಲಿಸಲು ಹೇಳುವುದು. |
| | | 2. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಅಗತ್ಯತೆ. | 1. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಅಗತ್ಯತೆ ಕುರಿತಂತೆ ಚರ್ಚೆ.<br>2. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಕುರಿತಂತೆ ಭಿತ್ತಿ ಪತ್ರ ತಯಾರಿಕೆ. | 1. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ಅಗತ್ಯತೆಯ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸುವುದು<br>2. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಕುರಿತಂತೆ ಬಿತ್ತಿ ಪತ್ರ ತಯಾರಿಸಲು ಅವಕಾಶ ಕಲ್ಪಿಸುವುದು.<br>3. ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ಟಿಪ್ಪಣಿ ಬರೆಸುವುದು. |

| | | | | |
|---|---|---|---|---|
| | | | 3. ನೈಸರ್ಗಿಕ ಸಂಪನ್ಮೂಲ ಕುರಿತಂತೆ ಟಿಪ್ಪಣಿ ಬರೆಸುವುದು. | |
| 3. | ಸಜೀವಿ ಮತ್ತು ನಿರ್ಜೀವಿಗಳ ಲಕ್ಷಣಗಳನ್ನು ತಿಳಿಯುವರು. | 1. ಸಜೀವಿ ಮತ್ತು ನಿರ್ಜೀವಿಗಳ ಲಕ್ಷಣಗಳು. | 1. ಸುತ್ತಮುತ್ತಲಿನ ವಸ್ತುಗಳಲ್ಲಿ ಸಜೀವಿ ,ನಿರ್ಜೀವಿಗಳನ್ನು ಗುರುತಿಸಿ ಪಟ್ಟಿ ತಯಾರಿಕೆ.<br>2. ಸಜೀವಿ ನಿರ್ಜೀವಿಗಳ ಗುಣಲಕ್ಷಣಗಳ ಕುರಿತಂತೆ ಚರ್ಚೆ.<br><br>3) ಸಜೀವಿಗಳ ಹಾಗೂ ನಿರ್ಜೀವಿಗಳ ಗುಣಲಕ್ಷಣಗಳ ಬಗ್ಗೆ ಪಟ್ಟಿ ತಯಾರಿಸುವುದು<br>4) ಪ್ರಾಣಿ ಹಾಗೂ ಸಸ್ಯಗಳ ನಡುವಿನ ಪರಸ್ಪರ ಅವಲಂಬನೆ ಬಗ್ಗೆ ಚರ್ಚೆ.<br>5. ದ್ಯುತಿ ಸಂಶ್ಲೇಷಣೆ ಹಾಗೂ ಉಸಿರಾಟದ ಚಕ್ರಿಯ ಸಮೀಕರಣಗಳ ಚಿತ್ರಪಟದ ರಚನೆ | 1. ವಿದ್ಯಾರ್ಥಿಗಳನ್ನು ಗುಂಪು ಮಾಡಿ ತಮ್ಮ ಸುತ್ತಮುತ್ತಲಿನ ಸಜೀವಿ, ನಿರ್ಜೀವಿಗಳನ್ನು ಗುರುತಿಸಿ ಪಟ್ಟಿ ಮಾಡಿಸುವುದು.<br>2. ನಿರ್ಜೀವಿಗಳ ಗುಣಲಕ್ಷಣಗಳನ್ನು ಮಕ್ಕಳಿಂದಲೇ ಪಟ್ಟಿ ಮಾಡಿಸುವುದು ಅಗತ್ಯವಿರುವಲ್ಲಿ ಮಾರ್ಗದರ್ಶನ ನೀಡುವುದು.<br>3. ಸಂತಾನೋತ್ಪತ್ತಿ, ಬೆಳವಣಿಗೆ ಹಾಗೂ ಜೀವಿತಾವಧಿ ಈ ಪ್ರತಿಯೊಂದು ಗುಣಲಕ್ಷಣಗಳು ಜೀವಿಯಿಂದ ಜೀವಿಗೆ ಹೇಗೆ ಭಿನ್ನವಾಗಿದೆ ಎಂದು ಚರ್ಚಿಸುವುದು ಹಾಗೂ ಸಸ್ಯಗಳು ಹಾಗೂ ಪ್ರಾಣಿಗಳ ಗುಣಲಕ್ಷಣಗಳಲ್ಲಿ ಇರುವ ಭಿನ್ನತೆಗಳನ್ನು ಗುರುತಿಸಲು ಮಾರ್ಗದರ್ಶಿಸುವುದು.<br>4. ಭಿನ್ನತೆಗಳು ಇದ್ದರೂ ಸಹ ಸಸ್ಯಗಳು ಹಾಗೂ ಪ್ರಾಣಿಗಳು ಹೇಗೆ ಪರಸ್ಪರ ಅವಲಂಬಿತವಾಗಿವೆ ಎಂದು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ದ್ಯು ತಿ ಸಂಶ್ಲೇಷಣೆ ಹಾಗೂ ಉಸಿರಾಟ ಕ್ರಿಯೆಗಳ ನಡುವಿನ ಸಂಬಂಧವನ್ನು ವಿವರಿಸುವುದು. |
| 4 | ಘನ ,ದ್ರವ, ಮತ್ತು ಅನಿಲಗಳನ್ನು ಅವುಗಳ ಗುಣಲಕ್ಷಣದ ಆಧಾರದ ಮೇಲೆ ವರ್ಗೀಕರಿಸುವರು. | 1. ಘನ ದ್ರವ ಮತ್ತು ಅನಿಲಗಳಲ್ಲಿ ಅಣುಗಳ ಜೋಡಣೆ. | 1. ಘನ ದ್ರವ ಅನಿಲಗಳಲ್ಲಿ ಅಣುಗಳ ಜೋಡಣೆ, ಕುರಿತಂತೆ ಇರುವ ವಿಡಿಯೋ ವೀಕ್ಷಣೆ<br>2. ಘನ ದ್ರವ ಅನಿಲಗಳಲ್ಲಿ ಅಣುಗಳ ಜೋಡಣೆಯನ್ನು ತೋರಿಸುವ ಚಿತ್ರಪಟ ತಯಾರಿಕೆ. | 1.https://youtu.be/VEFvYob-Jz8<br>2. ಘನ ದ್ರವ ಅನಿಲಗಳಲ್ಲಿ ಅಣುಗಳ ಜೋಡಣೆಯನ್ನು ತೋರಿಸುವ ಚಿತ್ರಪಟ ತಯಾರಿಸುವುದು. |

| | | | | |
|---|---|---|---|---|
| | | 2. ಘನ ದ್ರವ ಅನಿಲಗಳನ್ನು ಅವುಗಳ ಗುಣಲಕ್ಷಣಗಳ ಆಧಾರದ ಮೇಲೆ ವರ್ಗೀಕರಣ.<br>3. ಧಾತು ಸಂಯುಕ್ತಗಳು ಹಾಗೂ ಮಿಶ್ರಣಗಳಾಗಿ ವರ್ಗೀಕರಿಸುವರು.<br>4. ಸಂಯುಕ್ತ ವಸ್ತುಗಳು ಹಾಗೂ ಮಿಶ್ರಣಗಳ ನಡುವಿನ ವ್ಯತ್ಯಾಸ | 1.ಘನ ದ್ರವ ಅನಿಲಗಳ ಲಕ್ಷಣ ಕುರಿತಂತೆ ಚರ್ಚೆ.<br>2. ಘನ ದ್ರವ ಅನಿಲಗಳ ನಡುವಿನ ವ್ಯತ್ಯಾಸ ಗುರುತಿಸಲು ಸರಳ ಪ್ರಯೋಗಗಳು.<br>3. ಘನ ದ್ರವ ಅನಿಲಗಳಲ್ಲಿ ಅಣುಗಳ ಜೋಡಣೆ ತೋರಿಸುವ ಮಾದರಿಗಳ ತಯಾರಿಕೆ<br>4 ಸುತ್ತಮುತ್ತಲಿನ ವಸ್ತುಗಳಲ್ಲಿ ಘನ ದ್ರವ ಅನಿಲ ವಸ್ತುಗಳನ್ನು ಗುರುತಿಸಿ ಪಟ್ಟಿ ತಯಾರಿಕೆ<br>5. ಧಾತು ಹಾಗೂ ಸಂಯುಕ್ತಗಳ ನಡುವಿನ ವ್ಯತ್ಯಾಸ ತಿಳಿಸುವ ಸರಳ ಪ್ರಯೋಗಗಳು<br>6. ದಾತು ಸಂಯುಕ್ತ ಹಾಗೂ ಮಿಶ್ರಣಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಲು ದಾತು ಸಂಯುಕ್ತ ಹಾಗು ಮಿಶ್ರಣಗಳ ಮಾದರಿಗಳನ್ನು ಬಳಸಿ ವಿವರಿಸುವುದು.<br>7. ನಿತ್ಯ ಜೀವನದಲ್ಲಿ ಬಳಸುವ ದಾತು ಸಂಯುಕ್ತ ಹಾಗೂ ಮಿಶ್ರಣಗಳನ್ನು ಸಂಗ್ರಹಿಸುವುದು. | 1. ಘನ ದ್ರವ ಅನಿಲ ಲಕ್ಷಣಗಳ ಕುರಿತಂತೆ ಚರ್ಚೆಗೆ ಅವಕಾಶ ಕಲ್ಪಿಸೋಣ<br>2. ನಮ್ಮ ಸುತ್ತಮುತ್ತಲಿನ ವಸ್ತುಗಳಲ್ಲಿ ಘನ ದ್ರವ ಅನಿಲಗಳನ್ನು ಗುರುತಿಸಿ ಪಟ್ಟಿ ಮಾಡಿಸೋಣ<br>3. ಒಂದೇ ಅಳತೆಯ ಮೂರು ಬೀಕರ್ ಗಳನ್ನು ತೆಗೆದುಕೊಳ್ಳುವುದು ಅವುಗಳಲ್ಲಿ ಒಂದು ಖಾಲಿ ಎರಡನೇ ಬೀಕರಿನಲ್ಲಿ ನೀರು ಹಾಗೂ ಮೂರನೇ ಬೀಕರಿನಲ್ಲಿ ತುಂಬಾ ಮಣ್ಣು ತುಂಬಿಸುವುದು ಮೂರು ಬೀಕರ್‌ಗಳ ತೂಕವನ್ನು ಕೈಯಿಂದ ಎತ್ತಿ ವ್ಯತ್ಯಾಸ ಗುರುತಿಸಲು ಸಹಾಯ ಮಾಡುವುದು ಈ ರೀತಿ ವ್ಯತ್ಯಾಸವಿರಲು ಕಾರಣವೇನು ಇರಬಹುದು ಎಂದು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು ಹಾಗೂ ಘನ ದ್ರವ ಅನಿಲಗಳಲ್ಲಿ ಅಣುಗಳ ಜೋಡಣೆಯ ವ್ಯತ್ಯಾಸವನ್ನು ವಿವರಿಸುವುದು<br>4. ಥರ್ಮಾಕೋಲ್ ಬಾಲ್ ಗಳನ್ನು ಬಳಸಿ ಘನ ದ್ರವ ಅನಿಲಗಳಲ್ಲಿ ಅಣುಗಳ ಜೋಡಣೆಯನ್ನು ತೋರಿಸುವ ಮಾದರಿಗಳನ್ನು ವಿದ್ಯಾರ್ಥಿಗಳು ತಯಾರಿಸಲು ಮಾರ್ಗದರ್ಶಿಸುವುದು<br>5. ಧಾತುಗಳಿಂದ ಸಂಯುಕ್ತ ವಸ್ತುಗಳು ಹೇಗೆ ಉತ್ಪತ್ತಿಯಾಗುವೆಂದು ತೋರಿಸಲು ಮೆಗ್ನೀಷಿಯಂ ತಂತಿ ಉರಿಸಿ ತೋರಿಸುವುದು ಸಂಯುಕ್ತ ವಸ್ತುಗಳಲ್ಲಿ ಧಾತುಗಳು ಹೇಗೆ ತಮ್ಮ ಮೂಲ ಸ್ವರೂಪ ಕಳೆದುಕೊಳ್ಳುತ್ತವೆಂದು ಗುರುತಿಸಲು ಮೆಗ್ನೀಷಿಯಂ ತಂತಿ ಹಾಗೂ ಮೆಗ್ನೀಷಿಯಂ ಬೂದಿ ನಡುವಿನ ವ್ಯತ್ಯಾಸವನ್ನು ವಿವರಿಸುವುದು. |

| | | | | |
|---|---|---|---|---|
| | | | | 6. ಸಕ್ಕರೆಯನ್ನು ನೀರಿನಲ್ಲಿ ಕರಗಿಸಿ ಅದರ ನೀರು ಸಕ್ಕರೆಯನ್ನು ತನ್ನಲ್ಲಿ ಸಂಪೂರ್ಣ ವಿಲೀನಗೊಳಿಸಿಕೊಂಡರು ಸಕ್ಕರೆ ತನ್ನ ಗುಣವನ್ನು ಕಳೆದುಕೊಳ್ಳದಿರುವುದನ್ನು ಗುರುತಿಸಲು ಮಾರ್ಗದರ್ಶಿಸುವುದು ಬಳಿಕ ಒಂದು ಚಮಚ ಸಕ್ಕರೆ ನೀರನ್ನು ಸ್ಪಿರಿಟ್ ದೀಪದ ಸಹಾಯದಿಂದ ಕಾಯಿಸಿ ನೀರನ್ನು ಆವಿ ಮಾಡಿ ಸಕ್ಕರೆಯನ್ನು ಮರಳಿ ಪಡೆಯುವುದರ ಮೂಲಕ ಮಿಶ್ರಣಗಳಲ್ಲಿನ ಘಟಕಗಳನ್ನು ಸುಲಭವಾಗಿ ಪಡೆಯಲು ಸಾಧ್ಯವಿರುವುದನ್ನು ಪ್ರಾಯೋಗಿಕವಾಗಿ ತೋರಿಸುವುದು.<br>7. ಅಯಸ್ಕಾಂತವನ್ನು ಬಳಸಿ ಮರಳು ಹಾಗೂ ಕಬ್ಬಿಣದ ರಜಗಳನ್ನು ಬೇರ್ಪಡಿಸುವ ಚಟುವಟಿಕೆಯನ್ನು ಮಾಡಿಸುವುದು. |
| 5. | ನೀರಿನ ಮೂಲಗಳು, ನೀರಿನ ಉಪಯೋಗಗಳು,ಮಾಲಿನ್ಯ ಹಾಗೂ ಸಂರಕ್ಷಣಾ ಕ್ರಮಗಳನ್ನು ಅರಿಯುವರು | ನೀರಿನ ಮೂಲಗಳು<br>ನೀರಿನ ಉಪಯೋಗಗಳು | 1.ವಿವಿಧ ನೀರಿನ ಮೂಲಗಳ ಬಗ್ಗೆ ಪಟ್ಟಿ ತಯಾರಿಕೆ<br>2. ನೀರಿನ ಮೂಲಗಳ ಬಗ್ಗೆ ವಿಡಿಯೋ ಪ್ರದರ್ಶನ<br>3. ನೀರಿನ ಉಪಯೋಗಗಳ ಬಗ್ಗೆ ಪಟ್ಟಿ ತಯಾರಿಕೆ | 1. https://youtu.be/--t1cRc8fe0<br>2. ವಿವಿಧ ನೀರಿನ ಮೂಲಗಳ ಬಗ್ಗೆ ಪಟ್ಟಿ ತಯಾರಿಸಲು ಅವಕಾಶ ಕಲ್ಪಿಸುವುದು.<br>3. ನೀರಿನ ಉಪಯೋಗಗಳ ಬಗ್ಗೆ ಮಕ್ಕಳೇ ಪಟ್ಟಿ ತಯಾರಿಸಲು ಅವಕಾಶ ಕಲ್ಪಿಸುವುದು ಅಗತ್ಯವಿರುವಲ್ಲಿ ಮಾರ್ಗದರ್ಶನ ಮಾಡುವುದು. |
| | | 3. ನೀರಿನ ಸಂರಕ್ಷಣಾ ಕ್ರಮಗಳು | 1. ನೀರು ಪೋಲಾಗುತ್ತಿರುವ ವಿವಿಧ ಸಂದರ್ಭಗಳ ಕುರಿತಂತೆ ಇರುವ ವಿಡಿಯೋ ಪ್ರದರ್ಶನ . | https://youtu.be/OSH8GWQ0a3k<br>2.ನೀರಿನ ಸಂರಕ್ಷಣಾ ಕ್ರಮಗಳ ಬಗ್ಗೆ ಚರ್ಚಿಸೋಣ.<br>3.ನೀರಿನ ಸಂರಕ್ಷಣೆ ಕುರಿತಂತೆ ಭಿತ್ತಿ ಪತ್ರ ತಯಾರಿಸಲು ಸಹಾಯ ಮಾಡುವುದು. |

| | | | | |
|---|---|---|---|---|
| | | | 2.ನೀರಿನ ಸಂರಕ್ಷಣಾ ಕ್ರಮಗಳ ಬಗ್ಗೆ ಚರ್ಚೆ<br>3.ನೀರಿನ ಸಂರಕ್ಷಣೆ ಕುರಿತಂತೆ ಭಿತ್ತಿ ಪತ್ರ ತಯಾರಿಕೆ | |
| 6. | ಗಾಳಿಯ ಘಟಕಗಳು ಅವುಗಳ ಲಕ್ಷಣಗಳು ಮತ್ತು ವಾಯು ಮಾಲಿನ್ಯದ ಕುರಿತು ತಿಳಿಯುವರು. | 1. ಗಾಳಿಯ ಘಟಕಗಳು ಮತ್ತು ಅವುಗಳ ಲಕ್ಷಣ ಗಳು | 1.ಗಾಳಿಯ ಘಟಕಗಳನ್ನು ತೋರಿಸುವ ಚಿತ್ರಪಟ ತಯಾರಿಕೆ<br>2. ಗಾಳಿಯ ಘಟಕಗಳ ಕುರಿತಂತೆ ಚರ್ಚೆ | |
| | | 2.ವಾಯು ಮಾಲಿನ್ಯ | 1.ವಾಯು ಮಾಲಿನ್ಯಕ್ಕೆ ಸಂಬಂಧಿಸಿದಂತೆ ವಿಡಿಯೋ ವೀಕ್ಷಣೆ.<br>2. ವಾಯು ಮಾಲಿನ್ಯ ಕುರಿತಂತೆ ಟಿಪ್ಪಣಿ ಬರೆಯುವುದು. | |
| 7. | ಆಹಾರದ ಮೂಲಗಳು ಆಹಾರದಲ್ಲಿರುವ ಪೋಷಕಾಂಶಗಳ ಬಗ್ಗೆ ಅರಿಯುವರ ಆಹಾರ ಪೋಲಾಗುತ್ತಿರುವ ವಿವಿಧ ಸಂದರ್ಭಗಳನ್ನು ಅರಿಯುವರು.ಸಂರಕ್ಷಣೆ ಯ ಅಗತ್ಯವನ್ನು ಅರಿಯುವರು. | 1.ಆಹಾರದ ಮೂಲಗಳು ಹಾಗೂ ಅವುಗಳಲ್ಲಿರುವ ಪೋಷಕಾಂಶಗಳು<br>2.ಆಹಾರ ಪೋಲಾಗುತ್ತಿರುವ ವಿವಿಧ ಸಂದರ್ಭಗಳುಹಾಗೂ ಸಂರಕ್ಷಣೆಯ ಮಹತ್ವ | 1.ಆಹಾರದ ಮೂಲಗಳು ಹಾಗೂ ಅವುಗಳಲ್ಲಿರುವ ಪೋಷಕಾಂಶಗಳ ಬಗ್ಗೆ ಸಂಬಂಧಿಸಿದಂತೆ ವಿಡಿಯೋ ವೀಕ್ಷಣೆ.<br>2.ಆಹಾರದ ಮೂಲಗಳು ಹಾಗೂ ಅವುಗಳಲ್ಲಿರುವ ಪೋಷಕಾಂಶಗಳ ಕುರಿತಂತೆ ಆಲ್ಬಮ್ ತಯಾರಿಕೆ<br>3.ಆಹಾರ ಸಂರಕ್ಷಣೆ ಕುರಿತಂತೆ ಚರ್ಚೆ. | |
| 8. | ತ್ಯಾಜ್ಯ ವಿಲೇವಾರಿ ಕ್ರಮಗಳನ್ನು ಅರಿಯುವರು. ಪ್ಲಾಸ್ಟಿಕ್ ಬಳಕೆಗೆ ಪರ್ಯಾಯವಾಗಿ ಪರಿಸರ ಸ್ನೇಹಿ ವ್ಯವಸ್ಥೆಯನ್ನು ಕಂಡುಕೊಳ್ಳುವರು. | 1. ತ್ಯಾಜ್ಯ ವಿಲೇವಾರಿ ಕ್ರಮಗಳು<br>2.ಪರಿಸರದ ಮೇಲೆ ಪ್ಲಾಸ್ಟಿಕ್ ನ ಪ್ರತಿಕೂಲ ಪರಿಣಾಮ | 1.ತ್ಯಾಜ್ಯ ವಿಲೇವಾರಿ ಕ್ರಮಗಳಿಗೆ ಸಂಬಂಧಿಸಿದಂತೆ ಚರ್ಚೆ<br>2. ಪರಿಸರದ ಮೇಲೆ ಪ್ಲಾಸ್ಟಿಕ್ ನ ಪ್ರತಿಕೂಲ ಪರಿಣಾಮದ ಕುರಿತಂತೆ ವಿಡಿಯೋ ವೀಕ್ಷಣೆ | |

| | | | | |
|---|---|---|---|---|
| | | | 3..ಪ್ಲಾಸ್ಟಿಕ್ ಬಳಕೆಗೆ ಪರ್ಯಾಯವಾಗಿ ಪರಿಸರಸ್ನೇಹಿ ವ್ಯವಸ್ಥೆ ಬಗ್ಗೆ ಟಿಪ್ಪಣಿ ಬರೆಯುವುದು. | |
| 9 | ಹವಾಮಾನ ,ಭೂಪ್ರದೇಶ, ಮತ್ತುಸಂಪನ್ಮೂಲಗಳನಡುವಿನಸಂಬಂಧವನ್ನುಗ್ರಹಿಸುವರು**.** | 1.ಭೂಪ್ರದೇಶ ಮತ್ತು ಹವಾಮಾನಗಳ ನಡುವಿನಸಂಬಂಧ 2.ಭೂಪ್ರದೇಶ ಮತ್ತು ಸಂಪನ್ಮೂಲಗಳ ನಡುವಿನ ಸಂಬಂಧ | ವಿಶ್ಲೇಷಣೆ<br><br>ವೆಬ್ ಲಿಂಕ್ ವೀಕ್ಷಣೆ&ಚರ್ಚೆ | ಶಿಕ್ಷಕರು ಪ್ರಮುಖ ಸ್ಥಳಗಳ ಆ ದಿನದ ಹವಾಮಾನಕ್ಕೆ ಸಂಬಂಧಿಸಿದಂತೆ ದತ್ತಾಂಶ ನೀಡಿ,ಉಷ್ಣಾಂಶ,ಆರ್ದ್ರತೆ,ಮಾಲಿನ್ಯ,ಮೋಡಕವಿದಿರುವಿಕೆ ಮಾಹಿತಿಯನ್ನು ಮಕ್ಕಳು ವಿಶ್ಲೇಷಣೆ ಮಾಡಲು ಸಹಕರಿಸುವರು .<br>(ಗೂಗಲ್ ಅರ್ಥ್ ಅಪ್ಲಿಕೇಷನ್ ಬಳಸಿಕೊಳ್ಳಿ)<br>ಈ ಕೆಳಗಿನ ವೆಬ್ ಲಿಂಕ್ ಬಳಸಿಕೊಂಡು ಭೂಪ್ರದೇಶ ಮತ್ತು ಸಂಪನ್ಮೂಲಗಳ ನಡುವಿನ ಸಂಬಂಧವನ್ನು ಮಕ್ಕಳು ವಿವರಿಸುವರು. ಭಿನ್ನತೆಗೆ ಕಾರಣಗಳನ್ನು ಮಕ್ಕಳೊಂದಿಗೆ ಶಿಕ್ಷಕರು ಚರ್ಚಿಸಿ,ಮಾರ್ಗದರ್ಶಿಸುವರು.<br>https://www.youtube.com/watch?v=tbYhpIZtObA |

## ಪೂರ್ವ ಪರೀಕ್ಷೆ ಪ್ರಶ್ನಾವಳಿ

**ತರಗತಿ : 6** **ವಿಷಯ: ವಿಜ್ಞಾನ**

1. ಒಂದು ಕೀಟಹಾರಿ ಸಸ್ಯವನ್ನು ಹೆಸರಿಸು.
2. ಸಹಸ್ರ ಪಾದ ಹೊಂದಿರುವ ಪ್ರಾಣಿ ಯಾವುದು?
3. ಇವುಗಳನ್ನು ಸಜೀವಿಗಳು, ನಿರ್ಜೀವಿಗಳಾಗಿ ಗುಂಪು ಮಾಡಿ– ಕಪ್ಪೆ, ಮರ, ಕಲ್ಲಂಗಡಿ ಹಣ್ಣು, ಗಾಳಿ, ತೆಂಗಿನ ಕಾಯಿ, ನೀರು, ಪೆನ್, ಬಸ್, ಇರುವೆ.
4. ಪರಿಮಿತ ಸಂಪನ್ಮೂಲಕ್ಕೆ ಒಂದು ಉದಾಹರಣೆ ನೀಡಿ.
5. ಇವುಗಳಲ್ಲಿ ಯಾವುದು ನವೀಕರಿಸಬಹುದಾದ ಸಂಪನ್ಮೂಲ – ಕಬ್ಬಿಣ, ಕಲ್ಲಿದ್ದಲು, ಕಾಡು, ಪೆಟ್ರೋಲ್
6. ಇವುಗಳಲ್ಲಿ ಯಾವುವು ತೂಕವನ್ನು ಹೊಂದಿವೆ?– ಗಾಳಿ, ಮೋಡ, ನೀರು, ಹಸಿವು, ಕಲ್ಲು,
7. ನಿನ್ನ ಸುತ್ತ ಮುತ್ತ ಕಂಡುಬರುವ ಘನ ದ್ರವ ಮತ್ತು ಅನಿಲ ವಸ್ತುಗಳನ್ನು ಪಟ್ಟಿ ಮಾಡು.
8. ಜಲಮಾಲಿನ್ಯ ಉಂಟಾಗಬಹುದಾದ ಯಾವುದಾದರೂ ಎರಡು ಸಂದರ್ಭಗಳನ್ನು ನಮೂದಿಸಿ.
9. ನಿನ್ನ ಊರಿನಲ್ಲಿರುವ ಎರಡು ನೀರಿನ ಮೂಲಗಳನ್ನು ಹೆಸರಿಸು
10. ನಿನಗೆ ತಿಳಿದಿರುವ ಒಂದು ನೀರಾವರಿ ಪದ್ಧತಿಯನ್ನು ಹೆಸರಿಸಿ.
11. ಅಡುಗೆ ಮನೆಯಿಂದ ದೂರದಲ್ಲಿದ್ದರೂ ನಮಗೆ ಆಹಾರ ತಯಾರಾಗಿರುವ ವಾಸನೆ ತಿಳಿಯುವುದು ಹೇಗೆ?
12. ಗಾಳಿಯ ಒಂದು ಘಟಕವನ್ನು ಬರೆ.
13. ಪ್ರೋಟೀನ್ ಸಮೃದ್ಧವಾಗಿರುವ ಯಾವುದಾದರೂ ಎರಡು ಆಹಾರ ವಸ್ತುಗಳನ್ನು ಹೆಸರಿಸಿ. ಪ್ರೋಟೀನ್ ನಮ್ಮ ದೇಹಕ್ಕೆ ಏಕೆ ಅವಶ್ಯಕವಾಗಿದೆ?
14. ನೀನು ದಿನನಿತ್ಯ ಅನುಸರಿಸುವ ಒಂದು ಉತ್ತಮ ಆರೋಗ್ಯಕರ ಅಭ್ಯಾಸವನ್ನು ಬರೆ.
15. ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಗಟ್ಟಲು ನೀವು ಯಾವ ಸಲಹೆಗಳನ್ನು ನೀಡುತ್ತೀರಿ?
16. ಒಣ ಕಸಕ್ಕೆ ಒಂದು ಉದಾಹರಣೆ ಕೊಡಿ.
17. ನಿನ್ನ ಶಾಲೆಯಲ್ಲಿ ಹಮ್ಮಿಕೊಂಡಿರುವ ಪರಿಸರ ಸ್ನೇಹಿ ಚಟುವಟಿಕೆಗಳಾವುವು?
18. ಕೊಡೆ, ಸ್ವೆಟರ್, ಟೊಪ್ಪಿ ಅಥವಾ ಮುಂಡಾಸು – ಇವುಗಳಲ್ಲಿ ನಿಮ್ಮೂರಲ್ಲಿ ಅತ್ಯಂತ ಅವಶ್ಯಕವಾಗಿ ಹೊಂದಿರಬೇಕಾದ ಸಾಮಗ್ರಿ ಯಾವುದು? ಏಕೆ?
19. ಧ್ರುವ ಪ್ರದೇಶದಲ್ಲಿ ವಾಸಿಸುವ ಒಂದು ಪ್ರಾಣಿಯ ಹೆಸರನ್ನು ಬರೆ.
20. ವಾತಾವರಣದಲ್ಲಿರುವ ತೇವಾಂಶವನ್ನು ಏನೆಂದು ಕರೆಯುತ್ತಾರೆ?

## ಸಾಫಲ್ಯ ಪರೀಕ್ಷೆ ಪ್ರಶ್ನಾವಳಿ

**ತರಗತಿ : 6** **ವಿಷಯ: ವಿಜ್ಞಾನ**

1. ದ್ಯುತಿ ಸಂಶ್ಲೇಷಣೆ ಕ್ರಿಯೆಯಲ್ಲಿ ಬಿಡುಗಡೆಯಾಗುವ ಅನಿಲ ಯಾವುದು?
2. ನೀರಿನಿಂದ ಹೊರತೆಗೆದ ಮೀನು ಏನಾಗುತ್ತದೆ?
3. ಅಪರಿಮಿತ ಸಂಪನ್ಮೂಲಕ್ಕೆ ಒಂದು ಉದಾಹರಣೆ ಕೊಡಿ
4. ಇವುಗಳಲ್ಲಿ ಯಾವುದು ಪಳೆಯುಳಿಕೆ ಇಂಧನ– ಕಲ್ಲಿದ್ದಲು, ಸೌದೆ, ತೆಂಗಿನ ಎಣ್ಣೆ, ಜೈವಿಕ ಅನಿಲ
5. ಹುರಿಗಡಲೆಯು ನಿರ್ಜೀವ ವಸ್ತು ಆದರೆ, ಹಸಿಕಡಲೆಗೆ ಜೀವವಿದೆ. ಈ ವಾಕ್ಯವು ಸರಿ ಅಥವಾ ತಪ್ಪು. ನಿಮ್ಮ ಉತ್ತರಕ್ಕೆ ಕಾರಣ ನೀಡಿ.
6. ಗಾಳಿ ತುಂಬಿದ ವಾಲಿಬಾಲ್ ಮತ್ತು ಗಾಳಿ ತೆಗೆದ ವಾಲಿಬಾಲ್ ಇವುಗಳಲ್ಲಿ ಯಾವುದರ ತೂಕ ಹೆಚ್ಚು? ಯಾಕೆ?
7. ಘನ, ದ್ರವ, ಅನಿಲ ವಸ್ತುಗಳಿಗೆ ಸಂಬಂಧಿಸಿದ ಚಿತ್ರಗಳಿವೆ. ಇವುಗಳನ್ನು ಗುರುತಿಸಿ. ಘನ, ದ್ರವ ಮತ್ತು ಅನಿಲ ವಸ್ತುಗಳನ್ನು ಹೆಸರಿಸಿ.



8. ಜಲಮಾಲಿನ್ಯವನ್ನು ತಡೆಗಟ್ಟುವ ಎರಡು ವಿಧಾನಗಳನ್ನು ವಿವರಿಸಿ.
9. ನೀರಿನ ಎರಡು ಉಪಯೋಗ ಬರೆ.
10. ಸರಿ ಅಥವಾ ತಪ್ಪು ತಿಳಿಸು. ಹನಿ ನೀರಾವರಿ ಪದ್ಧತಿಯಿಂದ ನೀರಿನ ಸಂರಕ್ಷಣೆ ಮಾಡಬಹುದು.
11. ಅಂಗಡಿಗೆ ಹೋಗುವಾಗ ಕೈಚೀಲ ಒಯ್ಯುವುದನ್ನು ಮರೆಯಬಾರದು. ಏಕೆ?
12. ಗಾಳಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವ ಅನಿಲ ಯಾವುದು?
13. ಕೊಯ್ದಿಟ್ಟ ಹಣ್ಣಿನ ತೂಕವು ದಿನ ಕಳೆದಂತೆ ಕಡಿಮೆಯಾಗುತ್ತದೆ. ಇದಕ್ಕೆ ಕಾರಣವೇನು?
14. ಪ್ರತಿನಿತ್ಯ ಸ್ನಾನ ಮಾಡುವುದು ಉತ್ತಮ ಅಭ್ಯಾಸ ಏಕೆ?
15. ಮಧ್ಯಾಹ್ನದ ಬಿಸಿಯೂಟದಲ್ಲಿ ನೀವು ಇಷ್ಟಪಡುವ ಮೂರು ತರಕಾರಿಗಳನ್ನು ಮತ್ತು ಮೂರು ಸೊಪ್ಪುಗಳನ್ನು ಹೆಸರಿಸಿ.
16. ಹಸಿ ಕಸಕ್ಕೆ ಒಂದು ಉದಾಹರಣೆ ನೀಡಿ.
17. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಲು ನಿನ್ನ ಬಳಿ ಇರುವ ಮಾರ್ಗೋಪಾಯಗಳು ಯಾವುವು?ತಿಳಿಸು.
18. ಕೊಡೆ, ಮೊಸರು, ಐಸ್ ಕ್ರೀಮ್, ಬಿಸಿನೀರು, ಪ್ಲಾಸ್ಟಿಕ್ ಚಪ್ಪಲಿ, ಇವುಗಳಲ್ಲಿ ಮಳೆಗಾಲಕ್ಕೆ ಅಗತ್ಯವಾದವುಗಳನ್ನು ಗುರುತಿಸಿ.
19. ಧ್ರುವ ಪ್ರದೇಶದಲ್ಲಿ ವಾಸಿಸುವ ಹಿಮ ಕರಡಿ ಮಾಡಿಕೊಂಡಿರುವ ಹೊಂದಾಣಿಕೆ ಏನು?
20. ಹವಾಮಾನವನ್ನು ನಿರ್ಧರಿಸುವ ಅಂಶಗಳು ಯಾವುವು?

## ಆಕರ ಗ್ರಂಥಗಳು:-

1. ಕರ್ನಾಟಕ ರಾಜ್ಯ ಶಾಲಾ ಪಠ್ಯ ಪುಸ್ತಕಗಳು

2.ಹಿಂದಿನ ವರ್ಷಗಳ ಸೇತುಬಂಧ ಸಾಹಿತ್ಯ

3.ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ

4.ಕಲಿಕಾ ಚೇತರಿಕೆ ಕಲಿಕಾ ಹಾಳೆಗಳು

5.ಸಂವೇದ ತರಗತಿಯ ವಿಡಿಯೋ ಲಿಂಕ್ ಗಳು